



ಒಂದೊಂದು ಕ್ಷಣ ಭಗವಂತನಲ್ಲಿ ಮನಸ್ಸಿಡುವ ಪ್ರಯತ್ನ ಮಾಡುತ್ತಿದ್ದರೆ, ಒಂದಲ್ಲ ಒಂದು ದಿನ ಮನಸ್ಸು ಪೂರ್ಣವಾಗಿ ಭಗವಂತನದೇ ಆಗಿಬಿಡುತ್ತದೆ. ಯಾವ ಮನಸ್ಸು ನಮ್ಮ ಇಷ್ಟ ಅಭಿಪ್ರಾಯವೇ ತನ್ನದು ಎಂಬಂತೆ ನಾಟಕವಾಡಿ ನಮ್ಮನ್ನು ಅಧಃ ಪಾತಾಳಕ್ಕೆ ಎಳೆದು ತಂದಿರುತ್ತದೋ ಅದೇ ನಮ್ಮನ್ನು ಅವನಲ್ಲಿ ಸೇರಿಸಿಬಿಡುತ್ತದೆ.

ಅಷ್ಟೆಲ್ಲಾ ಏಕೆ ಗೀತೆಯ ಆರಂಭದ ಶ್ಲೋಕದ ಭಾಗವಾದ **'ಧರ್ಮಕ್ಷೇತ್ರೇ ಕುರುಕ್ಷೇತ್ರೇ'** ಇದೇ ಸಾಕು. 'ಕ್ಷೇತ್ರೇ ಕ್ಷೇತ್ರೇ ಧರ್ಮ ಕುರು' – ನೀನು ನಿಂತಿರುವ ಜೀವಿಸುತ್ತಿರುವ ಕ್ಷೇತ್ರ (ವಿದ್ಯಾರ್ಥಿ, ಗೃಹಸ್ಥ, ಉದ್ಯೋಗಿ, ಶಿಕ್ಷಕ, ಆರಕ್ಷಕ, ವಿಜ್ಞಾನಿ ಸಂಶೋಧಕ, ವೈದ್ಯ) ಯಾವುದೇ ಇರಲಿ, ಆಯಾ ಕ್ಷೇತ್ರದಲ್ಲಿ ನ್ಯಾಯಬದ್ಧವಾಗಿ ಆ ಕ್ಷೇತ್ರಧರ್ಮಕ್ಕೆ ಯೋಗ್ಯವಾಗಿ ನಡೆದುಕೋ – ಇಷ್ಟೇ ಸಾಕಲ್ಲ , **ನಾದತ್ತೇ ಕಸ್ಯಚಿತ್‌ಪಾಪಂ ನ ಚೈವ ಸುಕೃತಂ ವಿಭುಃ** *(೫-೧೫)* ಎಂಬಂತೆ ಅದು ಪಾಪವನ್ನಾಗಲೀ ಪುಣ್ಯವನ್ನಾಗಲೀ (ಫಲರೂಪವಾಗಿ) ಕೊಡದೆ, ವ್ಯಕ್ತಿಯನ್ನು (ಕರ್ಮ) ಯೋಗಿಯನ್ನಾಗಿ ಮಾಡಲು!

ಆದುದರಿಂದಲೇ ಶ್ರೀಶಂಕರರು **'ಭಗವದ್ಗೀತಾ ಕಿಂಚಿದಧೀತಾ'** ಎಂದೂ, ವೇದವ್ಯಾಸರು ಸ್ವತಃ ತಾವೇ, **'ಗೀತಾ ಸುಗೀತಾ ಕರ್ತವ್ಯಾ ಕಿಮನ್ಯೈಃ ಶಾಸ್ತ್ರವಿಸ್ತರೈಃ'** – ಬೇರೆ ಯಾವ ಯಾವ ಲಕ್ಷಾಂತರ ಶಾಸ್ತ್ರಗ್ರಂಥಗಳ ಅಧ್ಯಯನದಿಂದ ತತ್ತ್ವವಿಮರ್ಶೆಯಿಂದ ಏನೂ ಆಗುವುದಿಲ್ಲ , ಗೀತೆ ಒಂದನ್ನು ಚೆನ್ನಾಗಿ ಮನನ ಮಾಡಿ (ಒಂದನ್ನಾದರೂ) ಅನುಷ್ಠಾನಕ್ಕೆ ತಂದರೆ **(ಸುಗೀತಾ ಕರ್ತವ್ಯಾ)** ಸಾಕು ಎಂದು ಹೇಳಿದ್ದಾರೆ.

ಹೀಗೆ ಸರ್ವಜನಹಿತಕಾರಿ, ಸಕಲ ಹೃದಯವಿಕಾಸಕಾರಿ, ಸಮಸ್ತ ಸನ್ಮಂಗಲ ವಿಧಾಯಿ, ಸಕಲಲೋಕಶ್ರೇಯಃಕರಿ, ಸಕಲ ಮನರಂಜನಕರಿಯಾದ, ಅತ್ಯಂತ ಸರಳವೂ ಸುಲಭವೂ ಆದ ತತ್ತ್ವವಿಚಾರಗಳನ್ನು ಹೃದಯಂಗಮವಾಗಿ ಬೋಧಿಸಿ, ಕೈಹಿಡಿದು ಶ್ರೇಯೋಮಾರ್ಗದಲ್ಲಿ ನಡೆಸುವ – ಎದ್ದು ನಿಲ್ಲಲೂ ಆಗದ ಎಳೆ ಕಂದಮ್ಮನನ್ನು ಕೈಹಿಡಿದು ಮೇಲೆತ್ತಿ ದೃಢಹೆಜ್ಜೆ ಇಟ್ಟು ನಡೆಯುವಂತೆ ಮಾಡುವ, ತಾಯಿ ತಂದೆ ಗುರು ಬಂಧು – ಎಲ್ಲಾ ಆದ ಶ್ರೀಮದ್ಭಗವದ್ಗೀತೆಗೆ ಸಮನಾದ ಸಾಧಕನ ಮಾರ್ಗದರ್ಶಿ ಬೇರಾರು, ಬೇರಾವುದು ಇರಲು ಸಾಧ್ಯ?

ಕೃತಿಯ ಆವೃತ್ತಿಗಳು:

ಗೀತೆ ಬಹುಶಃ ವಿಶ್ವದಲ್ಲಿ ಅತ್ಯಧಿಕ ಆವೃತ್ತಿಗಳನ್ನು ಕಂಡ ಕೃತಿ ಇರಬಹುದು. ಇದು ಅನೇಕ ದೇಶದ, ಎಲ್ಲಾ ಭಾಷೆಗಳಿಗೂ ಭಾಷಾಂತರಗೊಂಡಿದೆ. ಇದರ ಜೀವನೋಪಯುಕ್ತತೆಯನ್ನು ಮನಗಂಡ ಮಹಿಮರೆಲ್ಲರೂ ಜನಮಾನಸವನ್ನು ಇದು ಸುಲಭವಾಗಿ ತಟ್ಟುವಂತೆ ತಮ್ಮ ತಮ್ಮ ಅನುಭವದ ಹಿನ್ನೆಲೆಯಲ್ಲಿ ತಾವು ವಿಶ್ವಾಸ ಇಟ್ಟಿರುವ ಪ್ರತಿಪಾದಿಸುವ ಮತ ತತ್ತ್ವದ ಆಧಾರದ ಮೇಲೆ ವಿಭಿನ್ನ ರೀತಿಯಲ್ಲಿ ತಮ್ಮದೇ ಆದ ಅರ್ಥವಿವರಣೆಯನ್ನು ಪ್ರಕಟಿಸಿದ್ದಾರೆ. ಕ್ರಿ.ಶ. ೮ನೇ ಶತಮಾನದ ಶ್ರೀ ಶಂಕರರಿಂದ ಆರಂಭವಾಗಿ ಇಂದು ಕ್ರಿ.ಶ. ೨೧ನೇ ಶತಮಾನದವರೆಗಿನ ಅನೇಕ ಮಹನೀಯರು ಈ ಕೃತಿಗೆ ವ್ಯಾಖ್ಯೆಯನ್ನು ನೀಡುತ್ತಲೇ ಬಂದಿದ್ದಾರೆ. ಶ್ರೀ ಶಂಕರರು (ಕ್ರಿ.ಶ. ೮), ಶ್ರೀರಾಮಾನುಜರು(ಕ್ರಿ.ಶ. ೧೨), ಶ್ರೀ ಮಧ್ವಾಚಾರ್ಯರು (ಕ್ರಿ.ಶ.೧೨), ಶ್ರೀ ನಿಂಬಾರ್ಕರು (ಕ್ರಿ.ಶ.೧೫), ವಲ್ಲಭಾಚಾರ್ಯರು ತಾವು ಅನುಭವಿಸಿ ಆನಂದಿಸಿದ ಸಿದ್ಧಾಂತದ ಹಿನ್ನೆಲೆಯಲ್ಲಿ ಇದಕ್ಕೆ ಭಾಷ್ಯ ಬರೆದಿದ್ದಾರೆ. ಶ್ರೀ ವೇದಾಂತದೇಶಿಕರು (ಕ್ರಿ.ಶ.೧೩), ಶ್ರೀ ಆನಂದಗಿರಿ(ಕ್ರಿ.ಶ.೧೩) ಶ್ರೀ ಜಯತೀರ್ಥರು(ಕ್ರಿ.ಶ.೧೩) ಆಚಾರ್ಯತ್ರಯರ ಭಾಷ್ಯಕ್ಕೆ ಅನುವ್ಯಾಖ್ಯಾನಗಳನ್ನು ರಚಿಸಿದ್ದಾರೆ. ೧೫ನೇ ಶತಮಾನದ ಶ್ರೀಧರಸ್ವಾಮಿಗಳು, ೧೬ನೇ ಶತಮಾನದ ಮಧುಸೂಧನ ಸರಸ್ವತೀ, ೧೭ನೇ ಶತಮಾನದ ರಾಘವೇಂದ್ರ ಇವರೆಲ್ಲರ ಗೀತಾ ವ್ಯಾಖ್ಯಾನಗಳೂ ಪ್ರಸಿದ್ಧವಾಗಿದೆ. ಕ್ರಿ.ಶ. ೧೯-೨೦ ನೇ ಶತಮಾನದಲ್ಲಿ ಶ್ರೀ ವಿನೋಬಾ ಭಾವೆ, ಶ್ರೀ ಲೋಕಮಾನ್ಯ ತಿಲಕರು, ಶ್ರೀ ಅರವಿಂದರು, ಹೊಳೆನರಸೀಪುರದ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು, ಸ್ವಾಮಿ ಆದಿದೇವಾನಂದರು, ಸ್ವಾಮಿ ಸೋಮನಾಥಾನಂದರು, ಸ್ವಾಮಿ ರಂಗನಾಥಾನಂದರು, ಶ್ರೀ ಡಿ.ವಿ. ಗುಂಡಪ್ಪ ಇವರು ಆಯಾ ಕಾಲದ ಜನತೆಗೆ ಅಗತ್ಯವಿರುವಂತೆ ಗೀತಾರ್ಥ ತಾತ್ಪರ್ಯ ವಿವರಣೆ ನೀಡಿದ್ದಾರೆ. ಈ ಎಲ್ಲವೂ ಅವರವರ ಭಾವ, ಯೋಗ್ಯತೆ, ಶಕ್ತಿ, ಅಧಿಕಾರಗಳಿಗೆ ಅನುಗುಣವಾಗಿ ಚಿಂತನಯೋಗ್ಯವೂ ಮನನಯೋಗ್ಯವೂ ಅನುಷ್ಠಾನಾರ್ಹವೂ ಆಗಿವೆ. ✤



ಭಾಗವತದಲ್ಲಿ ಆಧ್ಯಾತ್ಮಿಕ ಸಾಧನೆ

ಸ್ವಾಮಿ ವೀರೇಶಾನಂದ

ಭಕ್ತಿಪರಂಪರೆಯ ಸಾಧನೆಗಳಿಗೆಲ್ಲ ಆಧಾರಗ್ರಂಥವಾಗಿರುವ ಶ್ರೀಮದ್ಭಾಗವತವು ಭಗವಾನ್ ಶ್ರೀಕೃಷ್ಣನ ದಿವ್ಯಚರಿತೆಯನ್ನು ವಿಸ್ತಾರವಾಗಿ ವರ್ಣಿಸುವುದರೊಂದಿಗೆ, ಹಲವು ಬಗೆಯ ಆಧ್ಯಾತ್ಮಿಕ ತತ್ತ್ವಗಳನ್ನೂ ಒಳಗೊಂಡಿದೆ. ಶ್ರೀರಾಮಕೃಷ್ಣರಂತೂ, ''ಭಾಗವತ, ಭಕ್ತ, ಭಗವಾನ್ ಮೂರೂ ಒಂದೇ'' ಎನ್ನುತ್ತಿದ್ದರು. ಈ ಶ್ರೇಷ್ಠ ಗ್ರಂಥವನ್ನು ಕುರಿತು ಬರೆದಿರುವ ಪೂಜ್ಯ ಸ್ವಾಮೀಜಿಯವರು **'ವಿವೇಕಪ್ರಭ'**ದ ಹಿಂದಿನ ಸಂಪಾದಕರಾಗಿದ್ದರು. ಉತ್ತಮ ವಾಗ್ಮಿಗಳೂ, ಸಂಸ್ಕೃತ ವಿದ್ವಾಂಸರೂ ಆಗಿರುವ ಅವರು ಪ್ರಸ್ತುತ ಬೇಲೂರು ಮಠದಲ್ಲಿರುವ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕೃತಿಯ ಪರಿಚಯ

ನಮ್ಮ ದೇಶದ ಧಾರ್ಮಿಕ ಸಾಹಿತ್ಯದಲ್ಲಿ ಪುರಾಣಗಳಿಗೆ ವಿಶಿಷ್ಟ ಸ್ಥಾನವಿದೆ. ಪುರಾಣಗಳಲ್ಲಿ ಮಹಾಪುರಾಣ ಶ್ರೀಮದ್ಭಾಗವತ. ''**ಶ್ರೀಮದ್ಭಾಗವತಂ ಪುರಾಣಮಮಲಂ ಶ್ರೀಕೃಷ್ಣಲೀಲಾಮೃತಂ**'' – ಶ್ರೀಕೃಷ್ಣನ ಲೀಲಾಕಥನವೆಂಬ ಅಮೃತವನ್ನು ಹೊಂದಿರುವ ಭಾಗವತವು ಪುರಾಣಗಳಲ್ಲಿಯೇ ಪುಣ್ಯತಮವಾದದ್ದು ಎಂಬ ಪ್ರಸಿದ್ಧ ಉಕ್ತಿಯಿದೆ.

ಭಗವಾನ್ ವ್ಯಾಸರು ವೇದಗಳನ್ನು ವಿಂಗಡಿಸಿದರು; ಪುರಾಣಗಳನ್ನು ರಚಿಸಿದರು; ಮಹಾಭಾರತವನ್ನೂ ಬರೆದರು. ಆದರೂ ಅವರ ಮನಸ್ಸಿನಲ್ಲಿ ಏನೋ ಕಳವಳ, ವ್ಯಥೆ. ತಮ್ಮ ಬಳಿ ಬಂದ ನಾರದರ ಹತ್ತಿರ ಇದನ್ನು ತೋಡಿಕೊಂಡರು. ಅದಕ್ಕೆ ನಾರದರು ಹೀಗೆ ಉತ್ತರವಿತ್ತರು: ''ಪೂಜ್ಯ ವ್ಯಾಸರೇ, ಇಷ್ಟೊಂದು ಗ್ರಂಥಗಳನ್ನು ಬರೆದಿದ್ದೀರಿ. ಆದರೆ ಅವುಗಳಲ್ಲಿ ಭಗವಂತನ ಚರಿತ್ರೆಯನ್ನು ವಿಶೇಷವಾಗಿ ಬಣ್ಣಿಸದೆ ಕೇವಲ ಧರ್ಮ, ಅರ್ಥ, ಕಾಮಗಳನ್ನು ಬೋಧಿಸಿದ್ದೀರಿ. ಇದರಿಂದ ಮೋಹಿತರಾದ ಜನರು ಕಾಮ್ಯಕರ್ಮಗಳೇ ಮುಖ್ಯಧರ್ಮವೆಂದು ತಿಳಿದುಕೊಂಡು, ಅವುಗಳಲ್ಲೇ ನಿರತರಾಗಿದ್ದಾರೆ. ಇದರಿಂದ ನಿಮಗೆ ದೋಷವು ಉಂಟಾಗಿದೆ. ನೀವು ಮನೋವ್ಯಥೆಯಿಂದ ನರಳುತ್ತಿರುವುದು ಈ ಕಾರಣದಿಂದಲೇ. ವ್ಯಾಸರೇ, ನೀವು ಸಾಧಾರಣ ಮನುಷ್ಯರಲ್ಲ. ನಿಮ್ಮ ದೋಷವನ್ನು ಕಳೆದುಕೊಳ್ಳಲು ಮಹಾನುಭಾವನಾದ ಪರಮಾತ್ಮನ ಲೀಲೆಗಳನ್ನು ವಿಸ್ತಾರವಾಗಿ ಬಣ್ಣಿಸಿರಿ. ಎಲ್ಲರಿಗೂ ನೆಚ್ಚಿನವನಾದ ಭಗವಂತನ ಚರಿತ್ರೆಗಳನ್ನು ವರ್ಣಿಸುವುದೇ ಎಲ್ಲ ಧರ್ಮಕಾರ್ಯಗಳಿಗೂ ಪರಮಫಲವಾಗಿದೆ.''

ನಾರದರು ಹೊರಟುಹೋದ ಮೇಲೆ ವ್ಯಾಸರು ಭಕ್ತಿಯೋಗದಿಂದ ನಿರ್ಮಲವಾದ ತಮ್ಮ ಬುದ್ಧಿಯನ್ನು ಪರಮಾತ್ಮನಲ್ಲಿ ನಿಶ್ಚಲವಾಗಿ ನಿಲ್ಲಿಸಿದರು. ಈ ಧ್ಯಾನದಲ್ಲಿ ಭಗವಂತನ ಪುಣ್ಯಮೂರ್ತಿಯ ದರ್ಶನವನ್ನು ಪಡೆದುಕೊಂಡರು. ದರ್ಶನದಿಂದ ಪಡೆದುಕೊಂಡ ಜ್ಞಾನವನ್ನು ಭಾಗವತ ಶಾಸ್ತ್ರದ ರೂಪದಲ್ಲಿ ಭಟ್ಟಿ ಇಳಿಸಿದರು. ಮೊಟ್ಟಮೊದಲು ಇದನ್ನು ತಮ್ಮ ಪುತ್ರನಾದ ಶುಕಮುನಿಗೆ ಬೋಧಿಸಿದರು. ಶುಕಮಹರ್ಷಿ ಇದನ್ನು ಮೃತ್ಯುವನ್ನು ನಿರೀಕ್ಷಿಸುತ್ತಿದ್ದ ರಾಜ ಪರೀಕ್ಷಿತನಿಗೆ ಉಪದೇಶಿಸಿದನು. ಅಲ್ಲಿ ನೆರೆದಿದ್ದ ಅನೇಕ ಸಾಧುಸಂತರು ಇದನ್ನು ಕೇಳಿಸಿಕೊಂಡರು. ಅವರಲ್ಲಿ ಸೂತಪುರಾಣಿಕನೂ ಒಬ್ಬನು. ಅವನು ನೈಮಿಷಾರಣ್ಯದಲ್ಲಿ ಸಾವಿರ ವರ್ಷಗಳ ಕಾಲ ನಡೆಯುವ ಸತ್ರಯಾಗವನ್ನು ಮಾಡುತ್ತಿದ್ದ ಶೌನಕಾದಿ ಮುನಿಗಳಿಗೆ ಭಾಗವತವನ್ನು ಪ್ರವಚನ ಮಾಡಿದನು. ಹೀಗೆ ಭಾಗವತವು ಪ್ರಚಾರವಾಗುತ್ತ ಸಾಗಿತು.

'ಭಾಗವತ' ಈ ಪದದ ಅರ್ಥವೇನು? ಭಗ ಎಂದರೆ ಷಡ್ಗೈಶ್ವರ್ಯಗಳನ್ನು ಹೊಂದಿರುವವನೇ ಭಗವಂತ ಅಥವಾ ಭಗವತ್. ಭಾಗವತ ಎಂದರೆ ಭಗವದ್ಭಕ್ತ ಎಂದರ್ಥ. ಭಗವದ್ಭಕ್ತರ ಹಾಗೂ ಭಗವದವತಾರಗಳ ವೃತ್ತಾಂತಗಳು ಇಲ್ಲಿ ವಿಶೇಷವಾಗಿ ಕಂಡು ಬರುತ್ತವೆ. ಆದ್ದರಿಂದ ಈ ಗ್ರಂಥವು **'ಭಾಗವತ'** ಎಂದು ಪ್ರಸಿದ್ಧವಾಗಿದೆ.

ಮುಖ್ಯ ಸಾಧನೆ : ಭಕ್ತಿ

ಭಾಗವತವು ಮುಖ್ಯವಾಗಿ ಭಕ್ತಿಶಾಸ್ತ್ರ. ಮಿಕ್ಕೆಲ್ಲ ಸಾಧನೆಗಳೂ ಭಕ್ತಿಗೆ ಅಧೀನ ಎಂದು ಭಾಗವತವು ಸಾರುತ್ತದೆ. ಭಾಗವತದ ಪ್ರಕಾರ ಭಕ್ತಿ ಎನ್ನುವುದು ಬರಿಯ ಭಾವೋದ್ವೇಗವಲ್ಲ; ಅದು ಜೀವನತತ್ತ್ವ , ಪರಮಾತ್ಮನಲ್ಲಿ ನಮ್ಮ ವ್ಯಕ್ತಿತ್ವದ ಎಲ್ಲ ಅಂಶಗಳನ್ನೂ ಸಮರ್ಪಿಸುವುದು. ಇದನ್ನು ಈ ಶ್ಲೋಕವು ಸುಂದರವಾಗಿ ಬಣ್ಣಿಸುತ್ತದೆ:

ದೇವಾನಾಂ ಗುಣಲಿಂಗಾನಾಮ್ ಆನುಶ್ರವಿಕಕರ್ಮಣಾಮ್
ಸತ್ತ್ವ ಏವೈಕಮನಸೋ ವೃತ್ತಿಃ ಸ್ವಾಭಾವಿಕೀ ತು ಯಾ ।
ಅನಿಮಿತ್ತಾ ಭಾಗವತೀ ಭಕ್ತಿಃ ಸಿದ್ಧೇಃ ಗರೀಯಸೀ
ಜರಯತ್ಯಾಶು ಯಾ ಕೋಶಂ ನಿಗೀರ್ಣಮನಲೋ ಯಥಾ ॥

(೩:೨೫:೩೨-೩೩)

''ಮನುಷ್ಯನೊಬ್ಬನ ಜ್ಞಾನೇಂದ್ರಿಯಗಳು ಮತ್ತು ಕರ್ಮೇಂದ್ರಿಯಗಳೆಲ್ಲದರ ಶಕ್ತಿಗಳು ಒಂದುಗೂಡಿದ ಮಾನಸಿಕ ವೃತ್ತಿಯು ಸ್ವಾಭಾವಿಕವಾಗಿ, ತಾನೇತಾನಾಗಿ, ಬೇರೆ ಯಾವ ಕಾರಣವೂ ಇಲ್ಲದೆ ಭಗವಂತನ ಕಡೆಗೆ ಹರಿದಾಗ ಅದು 'ಭಕ್ತಿ' ಎಂದೆನಿಸಿಕೊಳ್ಳುತ್ತದೆ. ಇದು ಮೋಕ್ಷಕ್ಕಿಂತಲೂ ಹೆಚ್ಚಿನದು. ಅಗ್ನಿಯು ಎಲ್ಲ ಬಗೆಯ ಕೊಳಕನ್ನು ಸುಟ್ಟುಹಾಕಿಬಿಡುವಂತೆ, ಇದು ಬಹು ಬೇಗನೆ ಜೀವಿಯ ಅಜ್ಞಾನ ಕೋಶಗಳನ್ನು ಕರಗಿಸಿಬಿಡುತ್ತದೆ.''

ಭಾಗವತದ ಪ್ರಕಾರ, ಇಂಥ ಭಕ್ತಿಯೇ ಶ್ರೇಷ್ಠವಾದ ಧರ್ಮ.

ಸ ವೈ ಪುಂಸಾಂ ಪರೋ ಧರ್ಮೋ ಯತೋ ಭಕ್ತಿರಧೋಕ್ಷಜೇ।
ಅಹೈತುಕೀ ಅಪ್ರತಿಹತಾ ಯಯಾತ್ಮಾ ಸುಪ್ರಸೀದತಿ ॥ *(೧:೨:೬)*

''ಯಾವ ಆಚರಣೆಗಳಿಂದ ಭಗವಂತನಲ್ಲಿ ಭಕ್ತಿಯು ಉತ್ಪನ್ನವಾಗುವುದೋ, ಅದೇ ಶ್ರೇಷ್ಠವಾದ ಧರ್ಮ. ಅಂಥ ಭಕ್ತಿಗೆ ಬೇರೆ ಯಾವುದೇ ಹೊರಗಿನ ಕಾರಣಗಳು ಇರಬಾರದು. ಯಾವ ಬಗೆಯ ಪರಿಸ್ಥಿತಿಯೂ ಅದನ್ನು ಅಲುಗಾಡಿಸಬಾರದು. ಅಂಥ ಭಕ್ತಿಯಿಂದ ಮನುಷ್ಯನ ಮನಸ್ಸು ಪರಮಶಾಂತಿಯನ್ನು ಹೊಂದುತ್ತದೆ.''

ಎಲ್ಲ ಬಗೆಯ ಪುರುಷಾರ್ಥಗಳೂ ಭಗವದ್ಭಕ್ತಿಯಿಂದಲೇ ದೊರಕಿಬಿಡುತ್ತವೆ ಎಂದು ಭಾಗವತ ಹೇಳುತ್ತದೆ. ಅದರ ಪ್ರಕಾರ, ವಾಸುದೇವನಲ್ಲಿ ಮಾಡುವ ಭಕ್ತಿಯು ವೈರಾಗ್ಯವನ್ನೂ ಹಾಗೆಯೇ ಜ್ಞಾನವನ್ನೂ ಬೇರೆ ಯಾವುದೇ ಸಾಧನಗಳು ಬೇಕಾಗಿಲ್ಲದೆ

ಹುಟ್ಟಿಸುತ್ತದೆ. ಮನುಷ್ಯನೊಬ್ಬನ ಜೀವನದಲ್ಲಿ ಅತ್ಯಂತ ಅಮೂಲ್ಯವಾದ ವಸ್ತುವೇ ಭಕ್ತಿ. ಅವನು ಕಾಮರಹಿತನೋ, ಕಾಮಸಹಿತನೋ – ಎಂಥವನೇ ಆಗಿರಲಿ ಅವನು ನಿಜವಾಗಿಯೂ ಬುದ್ಧಿವಂತನೂ, ಪ್ರಾಮಾಣಿಕನೂ ಆಗಿದ್ದಲ್ಲಿ , **'ತೀವ್ರೇಣ ಭಕ್ತಿಯೋಗೇನ ಭಜೇತ ಪುರುಷಂ ಪರಂ'** – ಉತ್ಕಟವಾದ ಭಕ್ತಿಯೋಗದಿಂದ ಪರಮಪುರುಷನನ್ನು ಭಜಿಸಬೇಕು. ಧ್ಯಾನವನ್ನು ಮಾಡುವುದಕ್ಕೂ ಭಕ್ತಿಯೇ ಮುಖ್ಯ ಸಾಧನ. ಅದಕ್ಕೆ ವ್ಯಾಸನ ಉದಾಹರಣೆಯನ್ನೇ ಕೊಡುತ್ತದೆ ಭಾಗವತ. ವ್ಯಾಸನು ಭಕ್ತಿಯೋಗದ ಮೂಲಕವೇ ಮನಸ್ಸನ್ನು ನಿಯಂತ್ರಿಸಿಕೊಂಡನು; ಪವಿತ್ರವನ್ನಾಗಿ ಮಾಡಿಕೊಂಡನು; ಆ ಮೂಲಕವೇ ಪರಮಾತ್ಮನ ದರ್ಶನವನ್ನು ಪಡೆದನು ಎಂದು ಭಾಗವತ ಬಣ್ಣಿಸುತ್ತದೆ.

ಮುಕ್ತಿಗಿಂತಲೂ ಭಕ್ತಿಯೇ ಶ್ರೇಷ್ಠವಾದುದು. ಭಗವದವತಾರನಾದ ಕಪಿಲ ಮಹಾಮುನಿಯು ತನ್ನ ತಾಯಿ ದೇವಹೂತಿಗೆ ಹೀಗೆ ಉಪದೇಶ ಮಾಡುತ್ತಾನೆ: ''ಅಮ್ಮಾ, ಕೆಲವರು ಅತ್ಯಂತ ವಿರಳವಾದ ಸಾಧಕರಿದ್ದಾರೆ. ಅವರು ನನ್ನೊಂದಿಗೆ ಏಕೀಭಾವವನ್ನು (ಅದ್ವೈತ ಸ್ಥಿತಿ) ಹೊಂದಲು ಕೂಡ ಆಶಿಸರು. ಅವರು ಯಾವತ್ತೂ ನನ್ನ ಸೇವೆಯನ್ನು ಮಾಡಲು ಕಾತುರರಾಗಿರುತ್ತಾರೆ. ಅವರು ನನ್ನೊಡನೆ ಒಂದಾಗುವ ಪರಮಮೋಕ್ಷವನ್ನೂ ತಿರಸ್ಕರಿಸುತ್ತಾರೆ. ಏಕೆಂದರೆ ಅವರು ಯಾವತ್ತೂ ನನ್ನ ಸುಮನೋಹರ ರೂಪದೆಡೆಗೆ ಆಕರ್ಷಿತರಾಗುತ್ತಾರೆ.

''ಅಮ್ಮಾ, ಅಂಥ ಪರಮಭಕ್ತರು ಇಹ ಮತ್ತು ಪರಲೋಕಗಳ ಭೋಗವನ್ನು ತ್ಯಜಿಸಿಬಿಡುತ್ತಾರೆ; ಈ ಭೌತಿಕ ದೇಹಕ್ಕೆ ಸೇರಿದ ಸಂಪತ್ತು, ಭವನಗಳು, ಇತರೆ ಸ್ವತ್ತುಗಳು – ಎಲ್ಲವನ್ನೂ ತ್ಯಾಗ ಮಾಡುತ್ತಾರೆ.''

ವಿಸೃಜ್ಯ ಸರ್ವಾನನ್ಯಾಂಶ್ಚ ಮಾಮೇವಂ ವಿಶ್ವತೋಮುಖಮ್ ।
ಭಜಂತಿ ಅನನ್ಯಯಾ ಭಕ್ತ್ಯಾ ತಾನ್ ಮೃತ್ಯೋಃ ಅತಿಪಾರಯೇ ॥

(೩:೨೫:೪೦)

''ಹೀಗೆ ಮೇಲೆ ಹೇಳಿದ ಎಲ್ಲವನ್ನೂ, ಹಾಗೆಯೇ ಮಿಕ್ಕೆಲ್ಲವುಗಳನ್ನೂ ಸಂಪೂರ್ಣವಾಗಿ ತ್ಯಾಗಮಾಡಿದ ಅವರು ವಿಶ್ವಸ್ವರೂಪ



ನಾದ ನನ್ನನ್ನೇ ಎಲ್ಲವಿಧದಿಂದಲೂ, ಅನನ್ಯಭಾವದಿಂದ ಪೂಜಿಸುತ್ತಾರೆ. ಅಂತಹವರನ್ನು ನಾನು ಸಂಸಾರದ ಬಂಧನದಿಂದ ಬಿಡಿಸುತ್ತೇನೆ.''

ಪ್ರಹ್ಲಾದ ಭಕ್ತಶಿರೋಮಣಿ. ಅವನು ಭಗವಂತನನ್ನು ಹೀಗೆ ಕೇಳಿಕೊಳ್ಳುತ್ತಾನೆ: ''ಬ್ರಾಹ್ಮಣ ಪದವಿಯಾಗಲಿ, ದೇವಪದವಿಯಾಗಲಿ ಋಷಿಪದವಿಯಾಗಲಿ, ಒಳ್ಳೆಯ ನಡತೆಯಾಗಲಿ, ಪಾಂಡಿತ್ಯವಾಗಲಿ, ದಾನ, ತಪ, ಯಾಗ, ಶೌಚ, ವ್ರತ – **ಪ್ರೀಣನಾಯ ಮುಕುಂದಸ್ಯ ನ** – ಇದಾವುದೇ ಆಗಲಿ ಭಗವಂತನನ್ನು ಸಂತೃಪ್ತಗೊಳಿಸುವುದಿಲ್ಲ.'' ಹಾಗಾದರೆ ಭಗವಂತನು ಯಾವುದರಿಂದ ಸಂತುಷ್ಟಿಹೊಂದುತ್ತಾನೆ? ಇದಕ್ಕೆ ಉತ್ತರವಾಗಿ ಪ್ರಹ್ಲಾದನು ಒಂದು ಸುಂದರವಾದ ಮಾತನ್ನು ಹೇಳುತ್ತಾನೆ: **ಪ್ರೀಯತೇ ಅಮಲಯಾ ಭಕ್ತ್ಯಾ ಹರಿಃ ಅನ್ಯದ್ ವಿಡಂಬನಮ್** – ''ಹರಿಯು ಪರಿಶುದ್ಧವಾದ ಭಕ್ತಿಯಿಂದ ಮಾತ್ರವೇ ಸಂತೋಷಹೊಂದುತ್ತಾನೆ. ಉಳಿದವೆಲ್ಲ (ಮೇಲೆ ಉಲ್ಲೇಖಿಸಿದ ದಾನ, ತಪ, ಬ್ರಾಹ್ಮಣತ್ವ ಮುಂತಾದವು) ಬರಿಯ ಬೂಟಾಟಿಕೆ ಮಾತ್ರ.''

ತನ್ನ ಈ ಘೋಷಣೆಗೆ ಉದಾಹರಣೆಯಾಗಿ ಪ್ರಹ್ಲಾದನು ಗಜೇಂದ್ರನ ಉದಾಹರಣೆಯನ್ನು ಕೊಡುತ್ತಾನೆ: ''ಸಂಪತ್ತು, ಉನ್ನತ ಕುಲ, ರೂಪ, ತಪಸ್ಸು, ಪಾಂಡಿತ್ಯ, ತೇಜಸ್ಸು, ಪ್ರಭಾವಶಾಲಿ ವ್ಯಕ್ತಿತ್ವ, ಬಲ, ಪೌರುಷ, ಬುದ್ಧಿಶಕ್ತಿ, ಯೋಗಾಭ್ಯಾಸ – **ನ ಆರಾಧನಾಯ ಹಿ ಭವಂತಿ ಪರಸ್ಯ ಪುಂಸಃ** – ಇವು ಯಾವುವೂ ಭಗವಂತನನ್ನು ಆರಾಧಿಸಲು ಬೇಕಾದ ಅರ್ಹತೆಗಳಾಗಲು ಸಾಧ್ಯವಿಲ್ಲ. **ಭಕ್ತ್ಯಾ ತುತೋಷ ಭಗವಾನ್ ಗಜಯೂಥಪಾಯ** –ಏಕೆಂದರೆ, ಈ ಯಾವ ಅರ್ಹತೆಗಳೂ ಇಲ್ಲದ ಬರೀ ಆನೆಯಾದ ಗಜೇಂದ್ರನ ಮೇಲೆಯೂ ಭಗವಂತನು ಅನುಗ್ರಹವನ್ನು ಮಾಡಿದನು.''

ಭಕ್ತಿಸಾಧನೆಗೆ ಶಾಸ್ತ್ರಾಧ್ಯಯನದ ಆವಶ್ಯಕತೆ ಇಲ್ಲ. ಯಾಗ ಕರ್ಮಗಳ ಗೊಡವೆ ಇಲ್ಲ. ಅತ್ಯಂತ ಸುಲಭವಾದ ಈ ಭಾಗವತ ಧರ್ಮವನ್ನು ಎಲ್ಲರಿಗೂ ಅನುಕೂಲವಾಗಲೆಂದು ಭಗವಂತನು ದಯಪಾಲಿಸಿದ್ದಾನೆ. ಈ ಮಾರ್ಗವನ್ನು ಕ್ರಮಿಸುವವನು ಎಂದಿಗೂ ದಾರಿ ತಪ್ಪುವುದಿಲ್ಲ. ಅವನು ಕಣ್ಣು ಮುಚ್ಚಿಕೊಂಡು ಓಡಿಕೊಂಡು ಹೋದರೂ, ಬೀಳುವ ಅಥವಾ ಜಾರುವ ಸಂಭವವೇ ಇಲ್ಲ. ಇಂಥ ಸ್ಥಿತಿ ಯಾವುದರಿಂದ ಪ್ರಾಪ್ತವಾಗುತ್ತದೆ, ಗೊತ್ತೆ?

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಅನುಸೃತಸ್ವಭಾವಾತ್ ।
ಕರೋಮಿ ಯದ್ಯತ್ ಸಕಲಂ ಪರಸ್ಮೈ
ನಾರಾಯಣಾಯ ಇತಿ ಸಮರ್ಪಯೇತ್ತತ್ ॥ *(೧೧:೨:೩೬)*

''ಭಕ್ತನಾದವನು ತನ್ನ ದೇಹದಿಂದ, ಮಾತಿನಿಂದ, ಮನಸ್ಸಿನಿಂದ, ಬುದ್ಧಿಯಿಂದ ಏನೇನು ಮಾಡುತ್ತಾನೆಯೋ, 'ನಾನು ಮಾಡುವುದೆಲ್ಲವನ್ನೂ ಪರಮಾತ್ಮನಾದ ನಾರಾಯಣನಿಗೋಸ್ಕರ ಮಾಡುತ್ತೇನೆ' ಎಂಬ ಭಾವನೆಯಿಂದ ಸಮರ್ಪಣೆ ಮಾಡಬೇಕು.''

ಭಕ್ತಿಯು ಎಲ್ಲವನ್ನೂ ಪವಿತ್ರವನ್ನಾಗಿ ಮಾಡಿಬಿಡುತ್ತದೆ. ಶ್ರೀಕೃಷ್ಣನೇ ಭಾಗವತದಲ್ಲಿ ಹೀಗೆ ಹೇಳುತ್ತಾನೆ:

ಯಥಾಗ್ನಿಃ ಸುಸಮೃದ್ಧಾರ್ಚಿಃ ಕರೋತಿ ಏಧಾಂಸಿ ಭಸ್ಮಸಾತ್।
ತಥಾ ಮದ್ವಿಷಯಾ ಭಕ್ತಿಃ ಉದ್ಧವ ಏನಾಂಸಿ ಕೃತ್ಸ್ನಶಃ ॥ *(೧೧:೧೪:೧೯)*

''ಓ ಉದ್ಧವ, ಉರಿಯುತ್ತಿರುವ ಅಗ್ನಿಯು ಹೇಗೆ ಇಂಧನವನ್ನು ಸುಟ್ಟು ಬೂದಿ ಮಾಡಿಬಿಡುತ್ತದೆಯೋ, ಹಾಗೆಯೇ ನನ್ನನ್ನು ಕುರಿತಾದ ಭಕ್ತಿಯು ಎಲ್ಲ ಪಾಪಗಳನ್ನೂ ನಾಶಮಾಡಿಬಿಡುತ್ತದೆ.'' ಮುಂದುವರೆದು ಕೃಷ್ಣನು ಉದ್ಧವನಿಗೆ ಹೇಳುತ್ತಾನೆ: ''ಉದ್ಧವ, ನನ್ನನ್ನು ಪಡೆಯಲು ಯೋಗವಾಗಲಿ, ಜ್ಞಾನವಾಗಲಿ, ಧರ್ಮವಾಗಲಿ, ಸ್ವಾಧ್ಯಾಯ, ತಪ ಅಥವಾ ಸಂನ್ಯಾಸವಾಗಲಿ ಸಾಧನಗಳಾಗುವುದಿಲ್ಲ.''

ಭಕ್ತ್ಯಾ ಅಹಮೇಕಯಾ ಗ್ರಾಹ್ಯಃ ಶ್ರದ್ಧಯಾಽಽತ್ಮಾ ಪ್ರಿಯಃ ಸತಾಮ್।
ಭಕ್ತಿಃ ಪುನಾತಿ ಮನ್ನಿಷ್ಠಾ ಶ್ವಪಾಕಾನಪಿ ಸಂಭವಾತ್ ॥ *(೧೧:೧೪:೨೧)*

''ಶ್ರದ್ಧೆಯಿಂದ ಒಡಗೂಡಿದ ಭಕ್ತಿಯಿಂದ ಮಾತ್ರವೇ ಸಾಧುಗಳಿಗೆ ಅತ್ಯಂತ ಪ್ರಿಯನಾದ ನನ್ನನ್ನು ಪಡೆಯಲು ಸಾಧ್ಯ. ನಿಷ್ಠೆಯಿಂದ ಒಡಗೂಡಿದ ಭಕ್ತಿಯೊಂದೇ ಅತ್ಯಂತ ಅಧಮನನ್ನೂ ಪವಿತ್ರನನ್ನಾಗಿ ಮಾಡುವ ಶಕ್ತಿಯುಳ್ಳದ್ದು.''

ಜಗತ್ತಿನ ಎಲ್ಲ ಆಕರ್ಷಣೆಗಳಿಗಿಂತಲೂ ಭಗವಂತನ ಆಕರ್ಷಣೆ ಅತ್ಯಂತ ತೀವ್ರತರವಾದುದು ಎಂದು ಭಾಗವತವು ಬಣ್ಣಿಸುತ್ತದೆ.

ಆತ್ಮಾರಾಮಾಶ್ಚ ಮುನಯಃ ನಿರ್ಗ್ರಂಥಾ ಅಪಿ ಉರುಕ್ರಮೇ ।
ಕುರ್ವಂತಿ ಅಹೈತುಕೀಂ ಭಕ್ತಿಮ್ ಇತ್ಥಂ ಭೂತಗುಣೋ ಹರಿಃ ॥
(೧:೭:೧೦)

''ತಮ್ಮ ಆತ್ಮನಲ್ಲಿಯೇ ಪರಮಸುಖವನ್ನು ಕಂಡುಕೊಂಡು, ಅಹಂಕಾರ ಮುಂತಾದ ಎಲ್ಲ ರೀತಿಯ ಹೃದಯ ಗ್ರಂಥಿಗಳನ್ನೂ ಕಿತ್ತೆಸೆದ ಮುನಿಗಳು ಕೂಡ ಭಗವಂತನಲ್ಲಿ ನಿಷ್ಕಾರಣವಾದ ಭಕ್ತಿಯನ್ನು ಮಾಡುತ್ತಾರೆ. ಹರಿಯು ಇಂಥ ಅದ್ಭುತವಾದ ಕಲ್ಯಾಣ ಗುಣಗಳನ್ನು ಹೊಂದಿದ್ದಾನೆ!''

ಸಾಧು-ಸಂಗ

ಪರಮಾತ್ಮನಲ್ಲಿ ನಿಕಟವಾದ ಪ್ರೀತಿಯನ್ನು ಬೆಳೆಸಿಕೊಳ್ಳುವುದೇ ಪರಮಸಾಧನೆ ಎನ್ನುವುದನ್ನು ನೋಡಿದೆವು. ಈ ಬಗೆಯ ಭಕ್ತಿಯನ್ನು ಬೆಳೆಸಿಕೊಳ್ಳುವುದು ಹೇಗೆ? ಅದಕ್ಕೆ ಬೇಕಾದ ಸಹಕಾರಿ ಸಾಧನೆಯೆಂದರೆ **ಸಾಧುಸಂಗ** ಎನ್ನುತ್ತದೆ ಭಾಗವತ. ಶ್ರೀಶುಕ ಮುನಿ ಸಾಧುಸಂಗದ ಮಹಿಮೆಯನ್ನು ಹೀಗೆ ಕೊಂಡಾಡುತ್ತಾನೆ:

ನಷ್ಟಪ್ರಾಯೇಷ್ವಭದ್ರೇಷು ನಿತ್ಯಂ ಭಾಗವತ ಸೇವಯಾ ।
ಭಗವತ್ಯುತ್ತಮಶ್ಲೋಕೇ ಭಕ್ತಿರ್ಭವತಿ ನೈಷ್ಠಿಕೀ ॥ *(೧:೨:೧೮)*

''ಅಮಂಗಳಕರವಾದ ಪಾಪವೃತ್ತಿಗಳು ಭಕ್ತಿಯ ಉಗಮಕ್ಕೆ ಅಡೆತಡೆಗಳನ್ನು ಒಡ್ಡುತ್ತವೆ. ಅವುಗಳನ್ನು ನಿವಾರಿಸಿಕೊಳ್ಳುವ ಒಂದೇ ಉಪಾಯವೆಂದರೆ ಭಗವದ್ಭಕ್ತರ ಸೇವೆ. ಅದರಿಂದ ಭಗವಂತನಲ್ಲಿ ನಿಷ್ಠೆಯಿಂದ ಒಡಗೂಡಿದ ಭಕ್ತಿಯ ಸಿದ್ಧಿಸುತ್ತದೆ.''

ಚಕ್ರವರ್ತಿಯಾದ ಪೃಥು ಮಹಾರಾಜನು ಹೀಗೆ ಉದ್ಗರಿಸುತ್ತಾನೆ: ''ನಾನು ಜೀವಿಸಿರುವವರೆಗೂ ಮಹಾತ್ಮರ ಪಾದರೇಣುವನ್ನು ನನ್ನ ಕಿರೀಟದಲ್ಲಿ ಯಾವತ್ತೂ ಧರಿಸಿರುವಂತಾಗಲಿ! ಈ ರೀತಿ ಮಾಡಿದವರು ಮಾಡುವ ದಿನನಿತ್ಯದ ಪಾಪಗಳು ತೊಳೆದು ಹೋಗುತ್ತವೆ. ಅದರ ಸ್ಥಾನದಲ್ಲಿ ಸರ್ವಸದ್ಗುಣಗಳೂ ಮೈದೋರುತ್ತವೆ.''

ಭಗವಂತ ಭಕ್ತಪರಾಧೀನ! ಇದನ್ನು ಕೃಷ್ಣನೇ ಹೀಗೆ ಒಪ್ಪಿಕೊಳ್ಳುತ್ತಾನೆ: ''ದಾಸನಂತೆ ನಾನು ಭಕ್ತರ ಅಧೀನನಾಗಿದ್ದೇನೆ. ಭಕ್ತರಿಗೆ ನಾನು ಅತ್ಯಂತ ಪ್ರಿಯನಾಗಿರುವುದರಿಂದ, ನನ್ನ ಹೃದಯವನ್ನು ಅವರು ಸೆಳೆದೊಯ್ದಿದ್ದಾರೆ.''

ಸಾಧವೋ ಹೃದಯಂ ಮಹ್ಯಂ, ಸಾಧೂನಾಂ ಹೃದಯಂ ತ್ವಹಂ।
ಮದನ್ಯತ್ ತೇ ನ ಜಾನಂತಿ, ನಾಹಂ ತೇಭ್ಯೋ ಮನಾಗಪಿ ॥
(೯:೪:೬೮)

''ನನ್ನ ಹೃದಯ ಸಾಧುಗಳಲ್ಲಿಯೇ ನೆಲೆನಿಂತಿದೆ; ಸಾಧುಗಳ ಹೃದಯ ಕೂಡ ನನ್ನಲ್ಲಿಯೇ ನೆಲೆನಿಂತಿದೆ. ನನ್ನನ್ನು ಬಿಟ್ಟು ಅವರು ಮನಸ್ಸಿನಲ್ಲಿ ಏನೂ ಭಾವಿಸರು. ಅವರನ್ನು ಬಿಟ್ಟು ನನಗೆ ಕೂಡ ಯಾರೂ ಇಲ್ಲ.''

ಸರ್ವವನ್ನೂ ತ್ಯಾಗ ಮಾಡಿ, ಶಾಂತರೂ ಬ್ರಹ್ಮನಿಷ್ಠರೂ ಆಗಿರುವ ಸಾಧುಗಳು **ಲೋಕಪಾವನಾಃ** – ಮೂರು ಲೋಕಗಳನ್ನೂ ಪಾವನಗೊಳಿಸುವ ಮಹಾತ್ಮರು. ಅವರ ಸಂಪರ್ಕಮಾತ್ರದಿಂದ ಪಾಪಗಳೆಲ್ಲವೂ ಕಳೆದುಹೋಗುತ್ತವೆ. ಏಕೆಂದರೆ ಪತಿತಪಾವನನಾದ ಹರಿಯು ಅವರ ಹೃದಯಗಳಲ್ಲಿ ಎಂದಿಗೂ ನೆಲೆಸಿರುತ್ತಾನೆ.

ನವವಿಧಾ ಭಕ್ತಿ

ಸಾಧುಪುರುಷರ ಸಂಗ, ಗುರುಗಳ ಅನುಗ್ರಹ – ಇವು ಭಕ್ತಿಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತವೆ. ಸಾಧಕನು ಮಾಡುವ ಭಕ್ತಿಯು ಒಂಭತ್ತು ವಿಧಗಳಲ್ಲಿ ವ್ಯಕ್ತವಾಗುತ್ತದೆ ಎಂದು ಭಾಗವತ ಹೇಳುತ್ತದೆ.

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥
ಇತಿ ಪುಂಸಾರ್ಪಿತಾ ವಿಷ್ಣೋ ಭಕ್ತಿಶ್ಚೇನ್ನವಲಕ್ಷಣಾ ।
ಕ್ರಿಯತೇ ಭಗವತ್ಯದ್ಧಾ ತನ್ಮನ್ಯೇ ಅಧೀತಮುತ್ತಮಮ್ ॥
(೭:೫:೨೩-೨೪)

ಭಕ್ತಿ ಸಾಧನೆಯು ಈ ಒಂಭತ್ತು ರೂಪಗಳನ್ನು ತಾಳುತ್ತದೆ :

೧. **ಶ್ರವಣಂ :** ಹರಿಯ ಮಹಿಮೆಯನ್ನು ಅನವರತವೂ ಕೇಳುತ್ತಿರುವುದು.

೨. **ಕೀರ್ತನಂ :** ಆತನ ಸಂಕೀರ್ತನವನ್ನು ಯಾವತ್ತೂ ಮಾಡುತ್ತಿರುವುದು.

೩. **ಸ್ಮರಣಂ :** ಹಾಗೆಯೇ ಭಗವಂತನ ಸ್ಮರಣೆಯನ್ನೂ ಮಾಡುವುದು.

೪. **ಪಾದಸೇವನಂ:** ಭಗವಾನ್ ಶ್ರೀಹರಿಯನ್ನು (ವಿಗ್ರಹಗಳ ಸೇವೆ, ಸಾಧುಸಂತರ ಸೇವೆ ಮತ್ತು ಎಲ್ಲ ಜೀವಿರಾಶಿಗಳಿಗೆ ಸೇವೆ ಸಲ್ಲಿಸುವುದರ) ಮೂಲಕ ಸೇವಿಸುವುದು.

೫. **ಅರ್ಚನಂ :** ಪವಿತ್ರ ವಿಗ್ರಹಗಳಲ್ಲಿ ಭಗವಂತನನ್ನು ಆವಾಹಿಸಿ ಪೂಜಿಸುವುದು.

೬. **ವಂದನಂ :** ಪರಮಾತ್ಮನನ್ನು ಎಲ್ಲ ಜೀವರಾಶಿಗಳಲ್ಲಿ ಕಂಡು ವಂದನೆಯನ್ನು ಸಲ್ಲಿಸುವುದು.

೭. **ದಾಸ್ಯಂ :** ತಾನು ಶ್ರೀಹರಿಯ ಸೇವಕ ಎಂಬ ಭಾವವನ್ನು ತಳೆಯುವುದು.

೮. **ಸಖ್ಯಂ :** ಪರಮಾತ್ಮನಲ್ಲಿ ಸ್ನೇಹಭಾವವನ್ನು ಹೊಂದುವುದು .

೯. **ಆತ್ಮನಿವೇದನಂ :** ತನ್ನನ್ನು ಭಗವಂತನಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದು.

ಯಾವ ವ್ಯಕ್ತಿಯು ಈ **ನವವಿಧಾಭಕ್ತಿ**ಯನ್ನು ಶ್ರದ್ಧೆ ಮತ್ತು ನಿಸ್ಪೃಹ ಬುದ್ಧಿಗಳಿಂದ ಶ್ರೀಹರಿಗೆ ಅರ್ಪಿಸುತ್ತಾನೆಯೋ ಅವನೇ ನಿಜವಾಗಿಯೂ ಉತ್ತಮ ಶಿಕ್ಷಣವನ್ನು ಪಡೆದ ವಿದ್ವಾಂಸನು. ಇದು ಭಾಗವತದ ಖಚಿತ ಅಭಿಪ್ರಾಯ. ಹೀಗಾಗಿ ಕೇವಲ ಲೌಕಿಕ ಅಥವಾ ಆಧ್ಯಾತ್ಮಿಕ ವಿದ್ಯೆಗಳು ಅಪ್ರಯೋಜಕವಾದುವು ಎನ್ನುವುದು ಗೊತ್ತಾಗುತ್ತದೆ.

ಇಂಥ ಭಕ್ತಿಯನ್ನು ಯಾರಾದರೂ ಪರಿಪೂರ್ಣ ಭಾವದಿಂದ ಆಚರಿಸಿದ ಬಗ್ಗೆ ನಮಗೆ ಒಳ್ಳೆಯ ನಿದರ್ಶನ ಲಭಿಸುತ್ತದೆಯೆ? ಅದಕ್ಕೆ ಭಾಗವತವು ಪರಮ ಭಾಗವತೋತ್ತಮನಾದ ಅಂಬರೀಶನ ಉದಾಹರಣೆಯನ್ನು ನೀಡುತ್ತದೆ. ಆತನ ನಡೆನುಡಿ ಸ್ವಭಾವಗಳ ಸುಂದರ ವರ್ಣನೆಯನ್ನು ಭಾಗವತದಲ್ಲಿ ಹೀಗೆ ನೋಡುತ್ತೇವೆ. ಆತನ ಸರ್ವಾಂಗಗಳೂ, ಎಲ್ಲ ಆಚರಣೆಗಳೂ ಭಗವತ್‌ಕೇಂದ್ರಿತವಾಗಿಯೇ ಇದ್ದವು ಎನ್ನುವುದನ್ನು ಈ ನಿರೂಪಣೆಯಲ್ಲಿ ಸ್ವಭಾವ ಸಹಜ ರೂಪದಲ್ಲಿ ಕಾಣುತ್ತೇವೆ :

೧. ಅಂಬರೀಶನ ಮನಸ್ಸು ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಸಂಪೂರ್ಣವಾಗಿ ನೆಲೆಗೊಂಡಿತ್ತು.

೨. ಅವನ ಮಾತುಗಳು ಯಾವತ್ತೂ ವೈಕುಂಠಪತಿಯ ಗುಣಗಳನ್ನು ಬಣ್ಣಿಸುವುದರಲ್ಲಿಯೇ ನಿರತವಾಗಿತ್ತು.

೩. ಅತನ ಕೈಗಳು ಹರಿಮಂದಿರಗಳನ್ನು ಸ್ವಚ್ಛಮಾಡುವುದರಲ್ಲಿಯೇ ತೊಡಗಿದ್ದವು.

೪. ಅಂಬರೀಶನ ಕಿವಿಗಳು ಯಾವತ್ತೂ ಹರಿಯ ಕಥೆಗಳನ್ನು ಕೇಳುವುದರಲ್ಲಿಯೇ ತತ್ಪರವಾಗಿಬಿಟ್ಟಿದ್ದವು.

೫. ಅವನ ಕಣ್ಣುಗಳು ಮುಕುಂದನ ವಿಗ್ರಹಗಳನ್ನು ನೋಡುವುದರಲ್ಲಿಯೇ ತಮ್ಮ ಶಕ್ತಿಯನ್ನೆಲ್ಲ ವ್ಯಯಿಸುತ್ತಿದ್ದವು.

೬. ಅವನ ಸ್ಪರ್ಶೇಂದ್ರಿಯವು ಭಗವದ್ಭಕ್ತರ ಪಾದಸ್ಪರ್ಶದಲ್ಲಿಯೇ ಆನಂದವನ್ನು ಹೊಂದುತ್ತಿತ್ತು.

೭. ಅವನ ಘ್ರಾಣೇಂದ್ರಿಯವು ಭಗವಂತನ ಪೂಜೆಗೆ ಉಪಯೋಗವಾದ ತುಲಸೀದಳಗಳ ಆಸ್ವಾದನೆಯಲ್ಲಿಯೇ ನಿರತವಾಗಿತ್ತು.

೮. ಅವನ ನಾಲಗೆಯು ಭಗವಂತನ ಪ್ರಸಾದವನ್ನು ಭುಂಜಿಸುತ್ತಿತ್ತು.

೯. ಅಂಬರೀಶನ ಕಾಲುಗಳು ತೀರ್ಥಕ್ಷೇತ್ರಗಳ ಪ್ರವಾಸದಲ್ಲಿಯೇ ಸವೆಯುತ್ತಿದ್ದವು.

೧೦. ಅತನ ಶಿರಸ್ಸು ಹೃಷೀಕೇಶನ ಪಾದಗಳಿಗೆ ಸದಾ ವಂದಿಸುತ್ತಿತ್ತು (ಅಂಬರೀಶನು ಸಕಲ ಜೀವರಾಶಿಗಳಲ್ಲಿಯೂ ಪರಮಾತ್ಮನನ್ನೇ ಕಂಡು, ಎಲ್ಲರೊಡನೆ ವಿನೀತಭಾವದಿಂದ ಇರುತ್ತಿದ್ದನು.)

೧೧. ಭಗವಂತನ ದಾಸನಾಗಿ ಇರಬೇಕು ಎಂಬ ಒಂದೇ ಕಾಮನೆಯನ್ನು ಅವನು ಹೊಂದಿದ್ದನು. ಯಾವ ರೀತಿಯ ಸ್ವಾರ್ಥ ಭಾವನೆಯ ಕಾಮನೆಯೂ ಅವನ ಮನಸ್ಸಿನಲ್ಲಿ ಸುಳಿಯುತ್ತಿರಲಿಲ್ಲ.

ಈ ಬಗೆಯ ಭಕ್ತಿಯು ಅತ್ಯಂತ ಪ್ರಭಾವಶಾಲಿಯಾದುದು, ಅತ್ಯಂತ ಸಹಜವೂ ಸರಳವೂ ಆದದ್ದು. ವೃತ್ರನೆಂಬ ಭಕ್ತನು ತನ್ನ ಈ ಪ್ರಾರ್ಥನೆಯಲ್ಲಿ ನಿಜವಾದ ಭಕ್ತನ ಮಾನಸಿಕ ತುಮುಲವನ್ನು ಸಂವೇದನಾತ್ಮಕವಾಗಿ ಹೀಗೆ ತೋಡಿಕೊಂಡಿದ್ದಾನೆ:

ಅಹಂ ಹರೇ ತವ ಪಾದೈಕಮೂಲ-
ದಾಸಾನುದಾಸೋ ಭವಿತಾಽಸ್ಮಿ ಭೂಯಃ ।
ಮನಃ ಸ್ಮರೇತಾಽಸುಪತೇಃ ಗುಣಾಂಸ್ತೇ
ಗೃಣೀತ ವಾಕ್ ಕರ್ಮ ಕರೋತು ಕಾಯಃ ॥ *(೬:೧೧:೨೪)*

''ಪ್ರಭೂ, ಓ ಹರಿ! ನಿನ್ನ ಪಾದಗಳ ದಾಸಾನುದಾಸನಾಗಿ ನಾನು ಮತ್ತೆ ಮತ್ತೆ ಹುಟ್ಟಿಬರುವಂತೆ ಆಗಲಿ. ಹಾಗೆ ಆದಾಗಲೆಲ್ಲ ಮನಸ್ಸು ಭಗವಂತನನ್ನು ಸ್ಮರಿಸುತ್ತಿರಲಿ; ವಾಕ್ಕು ಭಗವಂತನ ಗುಣಗಳನ್ನು ಕೊಂಡಾಡುತ್ತಿರಲಿ; ನನ್ನ ಶರೀರವು ಭಗವಂತನ ಸೇವೆಯಲ್ಲಿಯೇ ನಿರತವಾಗಿರಲಿ.''

ಮೈತ್ರೇಯ ಮಹರ್ಷಿಗಳು ಹೀಗೆ ಉದ್ಗರಿಸುತ್ತಾರೆ: ''ಭಗವಂತನ ಕಲ್ಯಾಣಗುಣಗಳ ವರ್ಣನೆಯನ್ನು ಕೇಳುವುದರಲ್ಲಿಯೇ ಸಂಸಾರದುಃಖವೆಲ್ಲವೂ ಕಳೆದು ಹೋಗುತ್ತದೆ. ಇನ್ನು ಮನಸ್ಸಿನಲ್ಲಿ ಅತನ ಪಾದಕಮಲಗಳನ್ನು ಧ್ಯಾನಿಸುವುದು ಅದೆಷ್ಟು ಆನಂದವನ್ನು ಉಂಟುಮಾಡಬಹುದು!''

ಭಗವಂತನ ಪುಣ್ಯಕಥೆಗಳ ಶ್ರವಣ ಮತ್ತು ಕೀರ್ತನೆಗಳು ವ್ರತ-ಉಪವಾಸಗಳಿಗಿಂತಲೂ ಶ್ರೇಷ್ಠವಾದುವು ಎಂದು ಯಮ ಧರ್ಮರಾಯನೇ ಹೇಳುತ್ತಾನೆ:

ಶ್ರುಣ್ವತಾಂ ಗೃಣತಾಂ ವೀರ್ಯಾಣಿ ಉದ್ದಾಮಾನಿ ಹರೇರ್ಮುಹುಃ ।
ಯಥಾ ಸುಜಾತಯಾ ಭಕ್ತ್ಯಾ ಶುದ್ಧಯೇತ್ ಆತ್ಮಾ ವ್ರತಾದಿಭಿಃ ॥

(೬:೩:೩೨)

''ಭಗವಂತನ ಪರಾಕ್ರಮಗಳ ಬಗ್ಗೆ ಮತ್ತೆ ಮತ್ತೆ ಕೇಳುತ್ತಿರುವುದು, ಕೊಂಡಾಡುತ್ತಿರುವುದು ಭಕ್ತಿಯನ್ನು ಉದ್ದೀಪಿಸುತ್ತದೆ; ಅಂಥ ಭಕ್ತಿಯು ಭಕ್ತನಲ್ಲಿ ಆತ್ಮಶುದ್ಧಿಯನ್ನು ಉಂಟುಮಾಡುತ್ತದೆ. ಈ ಬಗೆಯ ಪರಿಶುದ್ಧತೆಯು ಯಾವ ಬಗೆಯ ವ್ರತದಿಂದಲೂ ಉಂಟಾಗುವುದಿಲ್ಲ.''

ಈಗ ಪ್ರತಿಯೊಂದು ಸಾಧನೆಯ ಬಗ್ಗೆ ಭಾಗವತ ಏನು ಹೇಳುತ್ತದೆ ಎನ್ನುವುದನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳೋಣ:

ಶ್ರವಣ

ಭಾಗವತದ ಪ್ರಕಾರ ಎಲ್ಲ ಧರ್ಮಗಳ ಉದ್ದೇಶವೇ ಭಗವಂತನ ಕೀರ್ತನೆಗಳನ್ನು ಕೇಳುವುದರಲ್ಲಿ ಆಸಕ್ತಿಯನ್ನೂ, ರುಚಿಯನ್ನೂ ಕೆರಳಿಸುವುದು. ಭಗವತ್ಕಥಾಶ್ರವಣದಲ್ಲಿ 'ರತಿ' ಅಥವಾ ಆನಂದವನ್ನು ಉಂಟುಮಾಡದ ಧರ್ಮಾಚರಣೆಗಳು ವ್ಯರ್ಥವೇ ಸರಿ! ಅದು ಬರಿಯ ಶ್ರಮ ಮಾತ್ರ.

ಭಗವತ್ಕಥಾಶ್ರವಣವು ಹಸಿವು, ನೀರಡಿಕೆಗಳನ್ನೂ ಇಂಗಿಸಿಬಿಡುತ್ತದೆ. ಪರೀಕ್ಷಿತನು ಏಳು ದಿವಸಗಳ ಕಾಲ ಸತತವಾಗಿ ಭಾಗವತ ಶ್ರವಣವನ್ನು ಮಾಡಿದನು. ಅವನು ತನ್ನ ಅನುಭವವನ್ನು ಶುಕ ಮಹರ್ಷಿಯಲ್ಲಿ ಹೀಗೆ ತೋಡಿಕೊಳ್ಳುತ್ತಾನೆ:

ನೈಷಾತಿದುಃಸಹಾ ಕ್ಷುನ್ಮಾಂ ತ್ಯಕ್ತೋದಕಮಪಿ ಬಾಧತೇ ।
ಪಿಬಂತಂ ತ್ವನ್ಮುಖಾಂಭೋಜಚ್ಯುತಂ ಹರಿಕಥಾಮೃತಂ ॥

(೧೦:೧:೧೩)

''ಒಂದು ಹನಿ ನೀರನ್ನೂ ಕುಡಿಯದೆ ನಿನ್ನ ಮುಖಕಮಲಗಳಿಂದ ಹೊರಸೂಸುತ್ತಿರುವ ಹರಿಕಥಾಮೃತವನ್ನು ಪಾನ ಮಾಡುತ್ತಿದ್ದೇನೆ. ಹೀಗಾಗಿ ಸಹಿಸಲು ಅತ್ಯಂತ ಕಷ್ಟವಾದ ಹಸಿವು ಕೂಡ ನನ್ನನ್ನು ಬಾಧಿಸುತ್ತಲೇ ಇಲ್ಲ.''

ಭಗವಂತನ ಕಥಾಶ್ರವಣವು ಅತಿಶಯವಾದ ಆನಂದವನ್ನು ತಂದುಕೊಡುತ್ತದೆ ಎಂದು ಶುಕನು ಹೇಳುತ್ತಾನೆ. ಭಗವದ್ಭಕ್ತರ, ಮಹಾತ್ಮರ ಕಥೆಗಳನ್ನು ಕೇಳುವುದೇ ಮಹತ್ತರವಾದ ಸಂತೋಷವನ್ನು ನೀಡುತ್ತದೆ. ಇನ್ನು ಭಗವಂತನ ಕಥೆಗಳನ್ನು ಕೇಳುವುದರಿಂದ ಅದೆಷ್ಟು ಮಿಗಿಲಾದ ಆನಂದ ಲಭಿಸುತ್ತದೆ, ಊಹಿಸಿಕೊಳ್ಳಿ ಎನ್ನುವುದು ಅವನ ವಾದ.